ಬಾಗಿಲ ಕಡೆ ಹೊರಟ ಅವಳನ್ನು ತಡೆದ ರಾಘವನ್, “ಸೀ ಉಷಾ, ನನ್ನ ನೋಟ್, ನಿನ್ನ ನೋಟ್ ಎಲ್ಲಾ ನೀಟಾಗಿ ರೆಕಾರ್ಡ್ ಆಗಬೇಕು. ನನ್ನ ನೋಟ್‌ನ ಜೆರಾಕ್ಸ್ ತೆಗೆದು ಈಗಲೇ ವಾರ್ಡ್ ಬಾಯ್ ಜೊತೆ ಅಡ್ಮಿನ್ ಆಫೀಸಿಗೆ ಕಳುಹಿಸು. ಹಾಗೆ ಆನ್‌ಲೈನ್‌ನಲ್ಲಿ ಡಿಟೇಲ್ಸ್ ಎಂಟ್ರಿ ಮಾಡಿ ಮೈನ್ ಸರ್ವರ್‌ನಲ್ಲೇ ಸೇವ್ ಮಾಡಬೇಕು ಪ್ಲೀಸ್. ನಾವೀಗ ಮಾಡ್ತೀರೋದು ಅಪಾಯಕಾರಿಯಾದ ಆದರೆ ಅನಿವಾರ್ಯವಾದ ಕೆಲಸ ಅನ್ನೋದು ನೆನಪಿರಲಿ” ಎಂದರು.

ರಾಘವನ್‌ರು ಪ್ರತಿಯೊಂದು ಪದವನ್ನು ಬಿಡಿಸಿ ಬಿಡಿಸಿ ಏಕೆ ಹೇಳಿದರೆನ್ನುವುದು ಉಷಾಳಿಗೆ ತಿಳಿದಿತ್ತು. ಐದು ವರ್ಷದಿಂದ ಐಸಿಯುನಲ್ಲಿರುವ ಅವಳಿಗೆ ಇಂತಹ ಪರಿಸ್ಥಿತಿ ಹಿಂದೆಂದೂ ಬಂದಿರಲಿಲ್ಲ. ಪೇಶೆಂಟ್ ಸಾಯದ ಹೊರತು, ಅಥವಾ ಬ್ರೈನ್ ಡೆಡ್ ಎಂದು ಕಮಿಟಿ ಸರ್ಟಿಫೈ ಮಾಡದ ಹೊರತು, ಆಕ್ಸಿಜನ್ ಸಪ್ಲೈ ನಿಲ್ಲಿಸಿದ ಒಂದೇ ಒಂದು ಘಟನೆ ಅವಳಿಗೆ ನೆನಪಿರಲಿಲ್ಲ. ಈಗ ಒಮ್ಮೆಲೆ ಏಳು ಜನಕ್ಕೆ ಆಕ್ಸಿಜನ್ ಸಪ್ಲೈ ನಿಲ್ಲಿಸಬೇಕಿದೆ. ಉಷಾ ಹೊರಬಂದು ನಡುಗುವ ಕೈಗಳಲ್ಲೇ ಬಾಗಿಲು ಎಳೆದು ಹೊರಟಳು.

ಉಷಾಳ ಕೈ ನಡುಗುವುದನ್ನು ಗಮನಿಸಿದ ರಾಘವನ್‌ಗೆ ಮೊದಲೇ ಒತ್ತಡದಲ್ಲಿರುವವಳಿಗೆ ಇನ್ನಿಷ್ಟು ಭಯ ತುಂಬಿದ ಬಗ್ಗೆ ಕೆಡಕೆನಿಸಿತು. ಗಾಡ್ ಎನ್ನುವ ಪದ ತನ್ನಲ್ಲಿ ಬಂದ ಸಿಡುಕಿಗೆ ಮೂಲ ಅನ್ನೋದು ಅವರಿಗೆ ತಿಳಿದಿತ್ತು. ಈ ಪದ ಕೇಳಿದಾಗಲೆಲ್ಲಾ ಉರಿದು ಹೋಗುತ್ತಿತ್ತು ಅವರಿಗೆ. ಆದರೆ, ಅದನ್ನು ಹೊರಹಾಕುತ್ತಿದ್ದು ತುಂಬಾ ಕಡಿಮೆಯೇ. ಇವತ್ತು ಅವರಲ್ಲಿ ಸಹನೆ ಇಲ್ಲವಾಗಿತ್ತು. ಕೇವಲ ಆಕ್ಸಿಜನ್ ಇಲ್ಲದೇ ಪೇಶೆಂಟ್‌ಗಳನ್ನು ಸಾಯಲು ಬಿಡಬೇಕಾದ ಸ್ಥಿತಿ ಬಂದಿದ್ದು ಅವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಆದರೆ, ಏನೂ ಮಾಡಲಾಗದು ಅನ್ನೋದು ಅವರಿಗೆ ತಿಳಿದಿತ್ತು. ಆದರೂ ಪೇಶೆಂಟು ಕೇವಲ ಆಕ್ಸಿಜನ್ ಇಲ್ಲದೇ ಸಾಯೋದು ಅಂದರೆ... ಕೈಯಲ್ಲಿದ್ದ ಪೆನ್ನನ್ನು ಎದುರಿಗಿದ್ದ ಗೋಡೆಗೆ ಬೀಸಿ ಒಗೆದರು. ಐದಾರು ಚೂರುಗಳಾಯಿತದು.

ಮಗಳು ನೀಡಿದ್ದ ಪೆನ್ನದು. ಪಿಎಚ್.ಡಿ. ಮಾಡಲು ದೊರೆತಿದ್ದ ಸ್ಕಾಲರ್‌ಶಿಪ್‌ನ ಮೊದಲ ಕಂತು ಬಂದಾಗ ತಂದು, “ನಿನ್ನ ಇಷ್ಟದ ಇಂಕ್ ಪೆನ್ನು” ಎನ್ನುತ್ತಾ ಕೈಗಿಟ್ಟಿದ್ದಳು. ಅನಗತ್ಯ ಪ್ಲಾಸ್ಟಿಕ್ ಬಳಕೆಯಿಂದ ಯಾವಾಗಲೂ ದೂರವಿರುತ್ತಿದ್ದ ಅವರಿಗೆ ಬಾಲ್ ಪೆನ್ನುಗಳು ಪ್ಲಾಸ್ಟಿಕ್ ಕಸ ಹೆಚ್ಚಿಸುತ್ತವೆನ್ನುವ ಆತಂಕ. ಹಾಗಾಗಿ ಇಂಕ್ ಪೆನ್ನು ಅವರ ಆಯ್ಕೆ. ಆದರೆ, ಕಳೆದ ವರ್ಷ ಇಂಕ್ ಬಾಟಲಿಗಾಗಿ ಐದಾರು ಅಂಗಡಿ ಸುತ್ತಬೇಕಾಗಿ ಬಂದಾಗ, ಜಗತ್ತು ಬದಲಾಗಿದೆ ಎನ್ನಿಸಿತವರಿಗೆ. ಎಲ್ಲವೂ ಯೂಸ್ ಅಂಡ್ ಥ್ರೋ. ಈಗೀಗ ಜೀವಗಳು ಕೂಡ ಬಿಸಾಡಲು ಇವೆ ಎಂದಾಗಿದೆ. ಕುಳಿತಲ್ಲಿಂದ ಎದ್ದು ಹೋಗಿ ನೆಲದಲ್ಲಿ ಬಿದಿದ್ದ ಪೆನ್ನಿನ ಚೂರುಗಳನ್ನು ಸಂಗ್ರಹಿಸಿ ಒಂದು ಸಣ್ಣ ಡಬ್ಬಿಯೊಳಗೆ ಹಾಕಿ ಇಟ್ಟರು. ಕಣ್ಣುಗಳಿಂದ ನೀರು ತುಳುಕಿತು. ಅದು ಪೆನ್ನಿಗಾಗಿ ಇಳಿಯಿತೋ ಅಥವಾ ತಮ್ಮ ಪೇಶೆಂಟ್‌ಗಳ ನೆನಪಾಗಿ ಇಳಿಯಿತೋ? ಗೊತ್ತಿಲ್ಲ. ಮೇಷ್ಟ್ರೇ ನೀವು ಇವತ್ತು ಇದ್ದಿದ್ದರೆ... ರಾಘವನ್‌ರಿಗೆ ಉಸಿರಾಡಲು ಕಷ್ಟವಾಗ ತೊಡಗಿತು.

ಮೂರು ದಶಕದ ವೈದ್ಯ ವೃತ್ತಿಯಲ್ಲಿ ಇಂತಹ ಸ್ಥಿತಿಯನ್ನು ಎದುರಿಸಿರಲಿಲ್ಲ. ಕಾಣದ ವೈರಸ್ ಇವತ್ತು ಊರನ್ನು ಆಳುತ್ತಿದೆ. ಇಲ್ಲ, ಆಳುತ್ತಿಲ್ಲ. ಹಾಳುಗೆಡುವುತ್ತಿದೆ. ಹೇಗೋ ಹಗಲು ರಾತ್ರಿ ಜೋಪಾನ ಮಾಡಿ, ಧೈರ್ಯ ತುಂಬಿ ರೋಗಿಯನ್ನು ಉಳಿಸಿಕೊಳ್ಳಲು ಎರಡು ತಿಂಗಳಿಂದ ಹೆಣಗಾಡಿದ್ದ ರಾಘವನ್‌ರಿಗೆ ಕಳೆದ ಎರಡು ವಾರದಿಂದ ಅದೂ ಸಾಧ್ಯವಾಗುತ್ತಿಲ್ಲ. ಬೇಕಾದ ಔಷಧಿಗೂ ಬರವಿತ್ತು. ಎರಡರಷ್ಟು ಹಣ ಕೊಟ್ಟರೂ ಸಿಗದ ಪರಿಸ್ಥಿತಿ. ಔಷಧಿ ಮಾತಿರಲಿ, ಉಸಿರಾಟದ ತೊಂದರೆಯಿರುವವರಿಗೆ ಆಕ್ಸಿಜನ್ ಕೂಡ ನೀಡಲಾಗದ ಸ್ಥಿತಿ. “ಥೂ... ನಮ್ಮ ಜನ್ಮಕಿಷ್ಟು. ಆಕ್ಸಿಜನ್ ಕೊಡಲು ಆಗಲಿಲ್ಲ ಅಂದ ಮೇಲೆ, ಈ ಆಸ್ಪತ್ರೆ, ಈ ಗೌನ್... ಇದೆಲ್ಲಾ